MVC No. 335/2025 - -

PW - 1

ದಿನಾಂಕಃ 18.06.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರ ವಕೀಲರಿಂದ -

ನಾನು ಪ್ರಯಾಣ ಮಾಡುತ್ತಿದ್ದ ಕಾರು ಇಂಡಿಕಾ ವಿಸ್ತಾ ಆಗಿರುತ್ತದೆ. ಸದರಿ ನಾನು ಪ್ರಯಾಣಿಸುತ್ತಿದ್ದ ವಾಹನಕ್ಕೆ ವಿಮೆ ಮತ್ತು ಆರ್ ಸಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ನಾನು ಪ್ರಯಾಣಿಸುತ್ತಿದ್ದ ಕಾರಿನ ವಿಮೆ 30.09.2015 ರಿಂದ 29.09.2016 ರವರೆಗೂ ಚಾಲ್ತಿಯಲ್ಲಿತ್ತು ಎಂದರೆ ಸರಿ. 1 ನೇ ಪ್ರತಿವಾದಿ ಸದರಿ ಕಾರನ್ನು ಚಾಲನೆ ಮಾಡಲು ಚಾಲನಾ ರಹದಾರಿಯನ್ನು ಹೊಂದಿದ್ದನು ಎಂದರೆ ಸರಿ. ನಾನು ಗ್ರೋ ಸೆಂಟರ್ ನಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಈ ರೀತಿಯಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ತನ್ನ ವಾಹನವನ್ನು ನಿಧಾನವಾಗಿ ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ಒಂದನೇ ಎದುರುದಾರ ಸ್ನೇಹಿತರು ಎಂದರೆ ಸರಿ. ಹಾಲಿ ನಾನು ಯಾವುದೇ ಕೆಲ ಮಾಡುತ್ತಿಲ್ಲ.

ನಾನು ತಿಂಗಳಿಗೆ 20 ಸಾವಿರ ವರಮಾನ ಪಡೆಯುತ್ತಿದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿರುತ್ತೇನೆ. ನಾನು ಈ ರೀತಿಯಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ರೀತಿಯ ಅಂಗನ್ಯೂನತೆ ಆಗಿಲ್ಲ ಹಾಗೂ ನಾನು ಚೆನ್ನಾಗಿ ಕೆಲಸ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಕ್ಲೆಮು ಅರ್ಜಿಯನ್ನು ನ್ಯಾಯಾಲಯಕ್ಕ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ನಾನು ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ತನ್ನ ವಾಹನವನ್ನು 3 ನೇ ಪ್ರತಿವಾದಿ ಬಳಿ ವಿಮೆ ಮಾಡಿಸಿರುವ ಕಾರಣ 1 ಮತ್ತು 2 ನೇ ಪ್ರತಿವಾದಿಯರು ಯಾವುದೇ ಪರಿಹಾರ ಹಣ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲಿಗೆ 3 ನೇ ಎದುರುದಾರರು ಸಮಯ ಕೋರಿದ್ದು ನೀಡಲಾಯಿತು.
(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ